ಕಥೋಪದೇಶ

# ಕೃತಜ್ಞತೆ

**ನಿರೂಪಣೆ : ಸ್ವಾಮಿ ವೀತಭಯಾನಂದಜಿ**
**ಚಿತ್ರ : ಬ್ರ. ಅದ್ವೈತ ಚೈತನ್ಯ**

ಒಂದು ಊರಿನಲ್ಲಿ ಒಬ್ಬ ಬಡ ಹುಡುಗನಿದ್ದ. ಅವನಿಗೆ ಚೆನ್ನಾಗಿ ಓದಿ ಜೀವನದಲ್ಲಿ ಮುಂದೆ ಬರಬೇಕೆಂದು ಬಹಳ ಆಸೆ. ಊಟ, ಬಟ್ಟೆ, ಪುಸ್ತಕ, ಶಾಲೆಯ ಶುಲ್ಕ, ಮುಂತಾದವುಗಳಿಗೆಲ್ಲ ಬೇಕಾಗುವ ಹಣಕ್ಕಾಗಿ ಶಾಲೆಯ ನಂತರ ಸಂಜೆ ಅಲ್ಲಿ ಇಲ್ಲಿ ಕೆಲಸ ಮಾಡುತ್ತಿದ್ದ. ಒಂದು ದಿನ ಅವನಿಗೆ ತುಂಬಾ ಹಸಿವಾಗಿತ್ತು. ಕೈಯಲ್ಲಿ ಹಣವೂ ಇರಲಿಲ್ಲ. ಬೇರೆ ದಾರಿ ತೋರದೆ ಯಾರ ಮನೆಯಲ್ಲಾದರೂ ಊಟ ಕೇಳೋಣವೆಂದು, ಒಂದು ಮನೆಯ ಮುಂದೆ ಬಂದು ಬಾಗಿಲನ್ನು ತಟ್ಟಿದ. ಮಹಿಳೆಯೊಬ್ಬಳು ಬಾಗಿಲು ತೆರೆದಳು. ಆಕೆ ತನ್ನನ್ನು ಬೈದು ಹೊರಹಾಕಿದರೆ! ಎಂಬ ಭಯದಿಂದ ಅವನು ತೊದಲುತ್ತಾ, "ಅಮ್ಮಾ, ಒಂದು ಲೋಟ ನೀರು ಕೊಡುವಿರಾ?" ಎಂದು ಕೇಳಿದ. ಆ ಮಹಿಳೆ ಇವನು ಬಹಳ ಸೊರಗಿರುವುದನ್ನು ಕಂಡು, "ಪಾಪ ತುಂಬ ಹಸಿದಿದ್ದಾನೆ" ಎಂದುಕೊಂಡು ಒಳಹೋಗಿ ಒಂದು ದೊಡ್ಡ ಲೋಟದಲ್ಲಿ ಬಿಸಿಯಾದ ಹಾಲು ತಂದು ಕೊಟ್ಟಳು. ಇವನು ಭಯದಿಂದ, "ಅಮ್ಮಾ, ಈ ಹಾಲಿನ ಹಣ ಕೊಡಲು ನನ್ನಲ್ಲಿ ಹಣವಿಲ್ಲ" ಎಂದ. ಅದಕ್ಕೆ ಆಕೆ, "ನೀನು ಈ ಹಾಲಿಗಾಗಿ ಹಣ ಕೊಡಬೇಕಿಲ್ಲ. ಕಾರಣ ನಮ್ಮ ತಾಯಿ ನಾನು ಚಿಕ್ಕವಳಾಗಿದ್ದಾಗ ಹಸಿದವರಿಗೆ ಏನನ್ನಾದರೂ ಕೊಟ್ಟರೆ ಅವರಿಂದ ಏನನ್ನೂ ತೆಗೆದುಕೊಳ್ಳಬಾರದು ಎಂದು ಹೇಳಿದ್ದಾಳೆ" ಎಂದಳು. ಹುಡುಗ ಸಂತೋಷದಿಂದ ಹಾಲನ್ನು ಕುಡಿದು, ಕೃತಜ್ಞತೆಯಿಂದ ಮನೆಗೆ ಹೋದ.



ಕೆಲವು ವರ್ಷಗಳು ಕಳೆದವು. ಆ ಮಹಿಳೆಯ ಆರೋಗ್ಯ ಯಾವುದೋ ಖಾಯಿಲೆಯಿಂದ ಹದಗೆಟ್ಟಿತು. ಚಿಕಿತ್ಸೆಗಾಗಿ ಆ ಊರಿನ ಎಲ್ಲ ವೈದ್ಯರನ್ನೂ ಕಂಡಳು. ಆದರೆ ಏನೂ ಪ್ರಯೋಜನವಾಗಲಿಲ್ಲ. ಕೊನೆಗೆ ಒಬ್ಬರು ವೈದ್ಯರು ದೆಹಲಿಯಲ್ಲಿರುವ ಅಖಿಲ ಭಾರತ ಆರೋಗ್ಯ ಸಂಸ್ಥೆಗೆ (All India Institute of Medical Sciences) ಹೋಗುವಂತೆ ತಿಳಿಸಿದರು. ಆದರೆ ಆಕೆಯ ಬಳಿ ಅಲ್ಲಿಗೆ ಹೋಗಿ ಚಿಕಿತ್ಸೆ ಪಡೆಯುವಷ್ಟು ಹಣ ಇರಲಿಲ್ಲ. ಕೊನೆಗೂ ಹೇಗೋ ದುಡ್ಡು ಹೊಂದಿಸಿಕೊಂಡು ಅಲ್ಲಿಗೆ ಹೋಗಿ ಸೇರಿಕೊಂಡಳು. ಈಕೆಯ ಚಿಕಿತ್ಸೆಯ ಹೊಣೆ ಅಲ್ಲಿ ಕೆಲಸ ಮಾಡುತ್ತಿದ್ದ ಹೌವರ್ಡ್ ಕೆಲ್ಲಿಸ್ ಎಂಬ ವೈದ್ಯರ ಪಾಲಿಗೆ ಬಿತ್ತು. ಆತ ಆಕೆಯ ಕೇಸ್ ಶೀಟ್ ನೋಡುತ್ತಿದ್ದಾಗ, ರೋಗಿಯ ಊರಿನ ಹೆಸರು ಕಣ್ಣಿಗೆ ಬಿದ್ದೊಡನೆ, ಆ ಊರು ತನಗೆ ಪರಿಚಿತವಾದ ಸ್ಥಳವೇ ಎಂದು ಆತನಿಗೆ ತಿಳಿಯಿತು. ತಕ್ಷಣ ತಾನು ಚಿಕಿತ್ಸೆ ನೀಡಬೇಕಾಗಿದ್ದ ರೋಗಿಯ ಬಳಿಗೆ ಹೋಗಿ ತಪಾಸಣೆ ಮಾಡಿ ಆಕೆಯನ್ನು ಗುರುತಿಸಿ ಚಿಕಿತ್ಸೆ ಪ್ರಾರಂಭಿಸಿದ. ಸುಮಾರು ಒಂದು ತಿಂಗಳ ಚಿಕಿತ್ಸೆಯ ನಂತರ ಆಕೆ ಗುಣಮುಖಳಾದಳು. ಆ ವೈದ್ಯನೂ ಸಹ ವಿಶೇಷ ಮುತುವರ್ಜಿ ವಹಿಸಿ ಚಿಕಿತ್ಸೆ ನೀಡಿದ್ದ. ಆಕೆಯ ಚಿಕಿತ್ಸೆಯ ಬಿಲ್ಲನ್ನು ತನಗೇ ಕಳುಹಿಸಬೇಕೆಂದು ಆತ ಆಸ್ಪತ್ರೆಯ ಕಾರ್ಯಾಲಯಕ್ಕೆ ಮೊದಲೇ ಸೂಚನೆ ನೀಡಿದ್ದ. ಬಿಲ್ ಭಾರಿ ಮೊತ್ತದ್ದಾಗಿತ್ತು. ಬಿಲ್ಲಿನ ಕೆಳಗೆ ಏನನ್ನೋ ಬರೆದು ಹಿಂತಿರುಗಿಸಿದ. ಕೊನೆಗೆ ಆಕೆಯಿದ್ದ ಕೊಠಡಿಗೆ ಬಿಲ್ ತಲುಪಿತು. ಆ ಮೊತ್ತವನ್ನು ನೋಡಿ ಆಕೆ ತುಂಬಾ ಗಾಬರಿಗೊಂಡಳು. ತನ್ನ ಆಸ್ತಿಯನ್ನೆಲ್ಲಾ ಮಾರಿದರೂ ಅಷ್ಟು ಹಣ ಹೊಂದಿಸುವುದು ಕಷ್ಟವೇ ಎನಿಸಿತು. ಬಹಳ ಆತಂಕದಿಂದ ಆ ಬಿಲ್ಲನ್ನು ಪದೇ ಪದೇ ನೋಡಿದಳು. ಹಾಗೇ ನೋಡುತ್ತಿರುವಾಗ ಕೆಳಗಡೆ ಏನೋ ಬರೆದಿರುವಂತೆ ಕಂಡಿತು. ನಿಧಾನವಾಗಿ ಓದಿದಳು. ಮೊದಲು ಆಕೆಗೆ ಏನೂ ಅರ್ಥವಾಗಲಿಲ್ಲ. ಆದರೂ ತನಗಾಗಿ ಬೇರೆ ಯಾರೋ ಹಣ ಪಾವತಿಸಿರುವರೆಂದು ಮಾತ್ರ ಗೊತ್ತಾಯಿತು. ವೈದ್ಯರು ಆ ಬಿಲ್ಲಿನ ಕೆಳಗಡೆ ಹೀಗೆ ಬರೆದಿದ್ದರು: **Paid in full by a glass of milk** ಅಂದರೆ, ಒಂದು ಲೋಟ ಹಾಲಿನಿಂದ ನಿಮ್ಮ ಹಣ ಪೂರ್ತಿ ಸಂದಾಯವಾಗಿದೆ.